# 16

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 12/12/20

---

ನಮ್ಮದು ರೈತಪರ ಸರಕಾರ ಎಂದ ಸಚಿವರಾದ ಅಶೋಕ್, ಎಸ್‌ಟಿಎಸ್

# ಕೃಷಿ ಕಾಯಿದೆ ಸಂಪೂರ್ಣ ರೈತ ಪರ




**ಬೆಂಗಳೂರು:** ನಮ್ಮದು ರೈತಪರ ಸರಕಾರ. ಎಪಿಎಂಸಿ ಸುಧಾರಣೆ ಹಾಗೂ ಭೂಸುಧಾರಣಾ ಕಾಯಿದೆಗಳೂ ಇದಕ್ಕೆ ಹೊರತಾಗಿಲ್ಲ ಎಂದು ಸಚಿವರಾದ ಆರ್.ಅಶೋಕ್ ಹಾಗೂ ಎಸ್.ಟಿ. ಸೋಮಶೇಖರ್ ಹೇಳಿದ್ದಾರೆ.

ವಿಧಾನಸೌಧದಲ್ಲಿ ಜಂಟಿ ಸುದ್ದಿಗೋಷ್ಠಿ ನಡೆಸಿ, "ನಾವು ತಂದಿರುವ ಕಾಯಿದೆಗಳು ರೈತರ ಸ್ವಾಭಿಮಾನವನ್ನು ಎತ್ತಿ ಹಿಡಿಯುತ್ತವೆ. ಇದರಿಂದ ನನ್ನ ಬೆಳೆ-ನನ್ನ ಹಕ್ಕು ಎಂಬ ಅಧಿಕಾರ ರೈತರಿಗೆ ಸಿಗುತ್ತದೆ," ಎಂದರು.

ಎಪಿಎಂಸಿ ಕಾಯಿದೆ ವಿವರಿಸಿದ ಸಹಕಾರ ಸಚಿವ ಸೋಮಶೇಖರ್, "ಮೊದಲಿನಿಂದಲೂ ರೈತನಿಗಾಗುವ ಅನ್ಯಾಯ ತಡೆಯುವುದು ನಮ್ಮ ಉದ್ದೇಶ. ಬೆಳೆ ಕೊಯ್ದು ವಾಹನಗಳಲ್ಲಿ ಹೇರಿಕೊಂಡು ಎಪಿಎಂಸಿಗೆ ತರುವ ರೈತನಿಗೆ ದಕ್ಕುವುದೇನು? ಎಂದು ಯೋಚಿಸಬೇಕು. ಈ ಬಗ್ಗೆ ಸಮಾಜದ ಪ್ರತಿಯೊಬ್ಬರೂ ಚಿಂತನೆ ಮಾಡಬೇಕು. ಕಲಂ 8(2) ರಡಿ ಇದುವರೆಗೆ ಅಧಿಸೂಚಿತ ಕೃಷಿ ಉತ್ಪನ್ನಗಳನ್ನು ಎಪಿಎಂಸಿ ಪ್ರಾಂಗಣದಲ್ಲೇ ಮಾರಾಟ ಮಾಡಬೇಕೆಂಬ ನಿರ್ಬಂಧವನ್ನು ತೆಗೆದು ಹಾಕಲಾಗಿದೆ. ಎಪಿಎಂಸಿ ಸಮಿತಿಯ ನಿಯಂತ್ರಣವನ್ನು ಪ್ರಾಂಗಣಕ್ಕೆ ಸೀಮಿತಗೊಳಿಸಿದೆ. ಕಲಂ 8(2)ರ ಉಲ್ಲಂಘನೆಗೆ ದಂಡ ಮತ್ತು ಸಜೆ ಶಿಕ್ಷೆಯನ್ನು ವಿಧಿಸುತ್ತಿದ್ದ ಕಲಂ 117 ಕೈಬಿಡಲಾಗಿದೆ. ಈ ತಿದ್ದುಪಡಿಯಿಂದ ರೈತ ತಾನು ಬೆಳೆದ ಬೆಳೆಯನ್ನು ತನ್ನ ಇಚ್ಛೆಯಂತೆ ಹೊಲ/ಫಾರಂ ಗೇಟ್ ಅಥವಾ ಎಪಿಎಂಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಸ್ವಾತಂತ್ರ್ಯ ಹೊಂದಿದ್ದಾನೆ. ನಾನು ಲಾಕ್‌ಡೌನ್ ಮತ್ತು ನಂತರದ ಸಂದರ್ಭಗಳಲ್ಲಿ 27 ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದೇನೆ. ಆಗ ಎಲ್ಲ ಜಿಲ್ಲೆಗಳ ಎಪಿಎಂಸಿಗಳಿಗೂ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದೇನೆ. ಎಲ್ಲ ರೈತರಿಂದಲೂ ಒಂದೇ ದೂರೆಂದರೆ ನಮ್ಮ ಬೆಳೆಗೆ ಸೂಕ್ತ ಬೆಲೆ ಸಿಗುತ್ತಿಲ್ಲ ಎಂಬುದಾಗಿತ್ತು. ಆಗ ಈ ನೂತನ ಎಪಿಎಂಸಿ ಕಾಯಿದೆ ಬಗ್ಗೆ ಅವರಲ್ಲಿ ಕೇಳಿದಾಗ ಎಲ್ಲರೂ ಸಂತಸ ವ್ಯಕ್ತಪಡಿಸಿದ್ದಾರೆ. ಇದನ್ನು ವಿರೋಧಿಸುವವರಿಗೆ ಕಾಯಿದೆಯಲ್ಲಿ ಏನಿದೆ ಎನ್ನುವುದೇ ತಿಳಿದಿಲ್ಲ. ವಿರೋಧಿಸುವವರು ಅದಕ್ಕೆ ಆಧಾರ ಇಟ್ಟುಕೊಳ್ಳಬೇಕು. ಜತೆಗೆ ಏಕೆ ಎಂಬುದನ್ನು ಹೇಳಬೇಕು," ಎಂದು ಸವಾಲೆಸೆದರು.

**ಸ್ಪರ್ಧಾತ್ಮಕ ಬೆಲೆ:** "ಕೇಂದ್ರದ ಕಾಯಿದೆ ಪೂರ್ವದಲ್ಲಿ ರಾಜ್ಯದಲ್ಲಿದ್ದ ಎಪಿಎಂಸಿ ಕಾಯಿದೆ ಅನುಸಾರ ಕೃಷಿ ಉತ್ಪನ್ನಗಳನ್ನು ಎಪಿಎಂಸಿ ಪ್ರಾಂಗಣದಲ್ಲಿ ಮಾರುವುದು ಅನಿವಾರ್ಯವಾಗಿತ್ತು. ಪ್ರಾಂಗಣದ ಹೊರಗೆ ಖರೀದಿಸಿದವರು ಶಿಕ್ಷೆಗೆ ಗುರಿಯಾಗುತ್ತಿದ್ದರು. ಹೊಸ ಕಾಯಿದೆಯಲ್ಲಿ ಈ ಅಂಶ ತೆಗೆಯಲಾಗಿದೆ," ಎಂದು ಸೋಮಶೇಖರ್ ತಿಳಿಸಿದರು.

"ಹೊಸ ಕಾಯಿದೆಯಂತೆ ನಾನಾ ಜಿಲ್ಲೆ, ರಾಜ್ಯಗಳಿಗೂ ಬೆಳೆ ಕೊಂಡು ಹೋಗಿ ಮಾರಾಟ ಮಾಡಬಹುದು. ರೈತರ ಹೊಲಕ್ಕೆ ವ್ಯಾಪಾರಿಗಳು ಬಂದು ಖರೀದಿಸಲು ಅವಕಾಶವಿದೆ. ರೈತರಿಗೂ ಸ್ಪರ್ಧಾತ್ಮಕ ಬೆಲೆ ದೊರಕಲಿದೆ. ಮಧ್ಯವರ್ತಿಗಳ ಹಾವಳಿ ತಪ್ಪಲಿದೆ. ಹೊಸ ಕಾಯಿದೆ ಜಾರಿಯಿಂದ ಎಪಿಎಂಸಿ ಮುಚ್ಚುವುದಿಲ್ಲ, ಕನಿಷ್ಠ ಬೆಂಬಲ ಬೆಲೆ ಯೋಜನೆಯೂ ಮುಂದುವರಿಯಲಿದೆ. ಎಪಿಎಂಸಿ ಪ್ರಾಂಗಣದ ಹೊರಗೆ ಖರೀದಿ ಮಾಡಲು 2007ರಲ್ಲೇ ಅವಕಾಶ ನೀಡಲಾಗಿದ್ದು ಇದರಡಿ 62 ಕಂಪನಿಗಳು ಪರವಾನಗಿ ಪಡೆದಿವೆ," ಎಂದು ತಿಳಿಸಿದರು.

**ಕಾಂಗ್ರೆಸ್ ಪ್ರೇರಿತ ಪ್ರತಿಭಟನೆ**

"ರೈತರ ಪ್ರತಿಭಟನೆ ಕಾಂಗ್ರೆಸ್ ಪ್ರೇರಿತವಾಗಿದೆ. ರೈತರನ್ನು ಮುಂದೆ ಬಿಟ್ಟು ಬೇಕೆಂತಲೇ ಪ್ರತಿಭಟನೆ ಮಾಡಲಾಗುತ್ತಿದೆ," ಎಂದು ಸಚಿವ ಆರ್.ಅಶೋಕ್ ಹೇಳಿದರು. "ಭೂಸುಧಾರಣೆ ಕಾಯಿದೆ ಬಗ್ಗೆ ಬಾಯಿ ಬಡಿದುಕೊಳ್ಳುತ್ತಿರುವ ಕಾಂಗ್ರೆಸ್‌ನವರು ಜಿಂದಾಲ್‌ಗೆ ಭೂಮಿ ಕೊಟ್ಟಿದ್ದರು," ಎಂದು ಆರೋಪಿಸಿದರು.

"ಗೋಹತ್ಯೆ ನಿಷೇಧ, ಭೂಸುಧಾರಣೆ ಹಾಗೂ ಎಪಿಎಂಸಿ ಕಾಯಿದೆಗಳು ರೈತರ ಪರವಾಗಿವೆ. ದೇವೇಗೌಡರು ನೇಗಿಲು ಹಿಡಿದು ಎಷ್ಟು ದಿನವಾಯ್ತು ಎಂದು ಕೇಳುವವರು ಅವರು ಎಂದಾದರೂ ನೇಗಿಲು ಹಿಡಿದಿದ್ದಾರಾ," ಎಂದು ಪ್ರಶ್ನಿಸಿದರು.